
# ಶಿಕ್ಷಕರಲ್ಲಿ ನಾಯಕತ್ವದ ಗುಣಗಳ ಅವಶ್ಯಕತೆ

ಹೆಚ್. ಮಲ್ಲಿಕಾರ್ಜುನ

ಶಿಕ್ಷಕರು ಸಮಾಜ ನಿರ್ಮಾಣದಲ್ಲಿ, ಹೊಸ ತಲೆಮಾರಿಗೆ ಮಾರ್ಗದರ್ಶನ ಮಾಡುವ ವಿಶಿಷ್ಟ ಪಾತ್ರವನ್ನು ವಹಿಸುತ್ತಾರೆ. ಎಳೆಯರ, ಮುಂದಿನ ಜನಾಂಗದ ವ್ಯಕ್ತಿತ್ವವನ್ನು ರೂಪಿಸುವ ಶಿಕ್ಷಕರಲ್ಲಿ ಹತ್ತುಹಲವು ಗುಣಗಳಿದ್ದಷ್ಟೂ ಸಮಾಜವು ಸದ್ಗುಣ ಸಂಪನ್ನವಾಗಿರುತ್ತದೆ. ಈ ಮಹತ್ವದ ವಿಷಯವಾಗಿ ಇಲ್ಲಿ ವಿವರಿಸುವ ಲೇಖಕರು ಹರಪನಹಳ್ಳಿಯ ಎಸ್.ಯು.ಜೆ.ಎಂ. ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.




ಶಿಕ್ಷಕರೆಲ್ಲರೂ ನಾಯಕರೇ. ತಮ್ಮ ವಿದ್ಯಾರ್ಥಿಗಳನ್ನು ವಿಜಯಶೀಲರಾಗಿ ಮುನ್ನಡೆಸುವ ಸಾರಥಿಗಳು, ಶ್ರಮ ನಿರತರು. ತಮ್ಮ ನಾಯಕತ್ವದಲ್ಲಿ ಎಷ್ಟೋ ಮಂದಿ ನಾಯಕರನ್ನು ತಯಾರು ಮಾಡುವ ಮಾನವತಾಮೂರ್ತಿಗಳು. ನಾಯಕತ್ವ ಲಕ್ಷಣಗಳುಳ್ಳ ಶಿಕ್ಷಕರ ಬಳಿ ವಿದ್ಯೆ ಕಲಿತ ವಿದ್ಯಾರ್ಥಿಗಳು ದೇಶಕ್ಕೆ ಕವಚವಾಗಿ ಮಾರ್ಪಾಡಾಗಿದ್ದಾರೆ. ವೃತ್ತಿ ಧರ್ಮಕ್ಕೆ ನ್ಯಾಯ ಒದಗಿಸಬೇಕಾದರೆ ಶಿಕ್ಷಕರು ನಾಯಕತ್ವ ಗುಣಗಳನ್ನು ಅಳವಡಿಸಿಕೊಳ್ಳಬೇಕು.

ನಾಯಕತ್ವ ಗುಣ ಹುಟ್ಟಿನಿಂದ ಬಂದಿರುವವರು ಕೆಲವರು ಇರಬಹುದು; ಆದರೆ ಅನೇಕ ಮಂದಿ ತಂದೆ-ತಾಯಿ, ಗುರು ಹಿರಿಯರು, ಪರಿಸರ, ಸಮಾಜದ ಪ್ರಭಾವದಿಂದ ನಾಯಕರಾಗುತ್ತಾರೆ. ನಾಯಕತ್ವ ಗುಣದಿಂದ, ಒಳ್ಳೆಯ ಸಂಭಾಷಣೆ, ನಡೆ-ನುಡಿಯಿಂದ ಆದರ್ಶ ಮತ್ತು ಮಾದರಿ ವ್ಯಕ್ತಿತ್ವದಿಂದ ಉತ್ತಮ ನಾಯಕರಾಗಿರುತ್ತಾರೆ. ತರಗತಿಯಲ್ಲಿ ಅವಶ್ಯವಾದ ಚಿತ್ರಗಳನ್ನು ತೋರಿಸುವುದು, ಸಮಕಾಲೀನ ವಾರ್ತೆ ತಿಳಿಸುವುದು, ಸ್ಲೈಡ್‌ಗಳು ಮತ್ತು ಮ್ಯಾಪ್, ಉದಾಹರಣೆ ಕೊಡುವುದು, ಕಥೆ ಹೇಳುವುದು, ಕ್ರೀಡೆ, ಸಾಹಿತ್ಯ, ಸಂಗೀತ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿ ಪ್ರೇರೇಪಿಸುತ್ತಾ ಪರಿಣಾಮಕಾರಿ ಬೋಧನೆಯಿಂದ ಶಿಕ್ಷಕ ಪಾಠ ಮಾಡುತ್ತಾರೆ. ನಾಯಕತ್ವದಲ್ಲಿ ಓದಿ ತಿಳಿಯುವ ಪಾಠಗಳಿಗಿಂತ ನೋಡಿ ಕಲಿಯುವ ಪಾಠಗಳೇ ಹೆಚ್ಚು.

**ಶಿಕ್ಷಕರು ಹಸುವಿನಂತೆ ಇರಬೇಕು :**

**ಹಸು ಕಸ ಮುಸುರೆ ತಿಂದು ಹಾಲನ್ನೇ ಕೊಡುತ್ತದೆ.**

ಇಂತಹ ಶಿಕ್ಷಕರೇ ಉತ್ತಮ ನಾಯಕತ್ವವುಳ್ಳವರು. ಪ್ರಪಂಚದಲ್ಲಿ ಕೆಲವರು ನಾಯಕರು ಮಾತ್ರ ಇರುತ್ತಾರೆ. ಉಳಿದವರೆಲ್ಲಾ ಅವರ ಅನುಯಾಯಿಗಳಾಗಿ ಅನುಸರಿಸುತ್ತಾರೆ. ಆದರೆ ಪ್ರತಿಯೊಬ್ಬ ಶಿಕ್ಷಕನಲ್ಲಿಯೂ ನಾಯಕತ್ವದ ಗುಣವಿರುತ್ತದೆ. ನಾಯಕತ್ವದ ಗುಣವುಳ್ಳ ಉತ್ತಮ ಶಿಕ್ಷಕರು ಕೆಲಸವನ್ನು ಹೇಳದೆ, ತಾವೇ ಕೆಲಸ ಮಾಡುತ್ತಾ ಇತರರು ಮಾಡುವಂತೆ ಪ್ರೇರೇಪಿಸುತ್ತಾರೆ, ಸ್ಫೂರ್ತಿದಾಯಕರಾಗಿರುತ್ತಾರೆ. ಶಿಕ್ಷಕನಲ್ಲಿ ನಾಯಕತ್ವದ ಗುಣ ಇಲ್ಲದಿದ್ದರೆ ವೃತ್ತಿಯಲ್ಲಿ ಯಶಸ್ಸನ್ನು ಕಾಣಲಾರ. ತರಗತಿಯಲ್ಲಿ ತುಂಬಾ ಚೆನ್ನಾಗಿ ಪಾಠ ಮಾಡುವವರಿಗೆ ಬಾಹ್ಯ ಪ್ರಪಂಚದಲ್ಲಿ ಉತ್ತಮ ನಡೆ-ನುಡಿ, ಚಾರಿತ್ರ್ಯ ಇಲ್ಲದಿದ್ದರೆ ಅಂಥವರನ್ನು ಉತ್ತಮ ಶಿಕ್ಷಕ ಎನ್ನಲಾಗದು. ಕೆಲವರು ತರಗತಿಯಲ್ಲಿ ತುಂಬಾ ಚೆನ್ನಾಗಿ ಪಾಠ ಮಾಡುತ್ತಾರೆ. ಬಾಹ್ಯ ಪ್ರಪಂಚದ ಜ್ಞಾನದ ಅರಿವಿರುವುದಿಲ್ಲ ಮತ್ತು ನಾಯಕತ್ವದ ಗುಣವಿರುವುದಿಲ್ಲ. ಅಂತವರನ್ನು ಉತ್ತಮ ಶಿಕ್ಷಕ ಎನ್ನಲಾಗದು.

**ಅಶಕ್ತ ಶಿಕ್ಷಕ ದೂರುತ್ತಾನೆ**
**ಸಾಮಾನ್ಯ ಶಿಕ್ಷಕ ವಿವರಿಸುತ್ತಾನೆ**
**ಉತ್ತಮ ಶಿಕ್ಷಕ ಬೋಧಿಸುತ್ತಾನೆ**
**ಮಹಾ ಶಿಕ್ಷಕ (ಗುರು) ಸ್ಫೂರ್ತಿಗೊಳಿಸುತ್ತಾನೆ.**

''ಗುರು ಎಂಬುದು ದೊಡ್ಡ ಹೆಸರು. ನಾವು ಸಂಬಳದ ಉಪಾಧ್ಯಾಯರು.'' — ಬಿ. ಎಂ. ಶ್ರೀ.ಯವರ ಹೇಳಿಕೆಯಂತೆ ಗುರುವಿನ ಸ್ಥಾನ ದೊಡ್ಡದು. ಆದರೆ ಸಂಬಳಕ್ಕಾಗಿ ಕೆಲಸ ಮಾಡುವವರು ಅನೇಕರಿದ್ದಾರೆ. ಸಂಬಳ ಎಷ್ಟೇ ಸಿಕ್ಕರೂ ತೃಪ್ತಿ ಇಲ್ಲ. ಸಂತೃಪ್ತಿಯ ಜೀವನವೇ ಶಿಕ್ಷಕರ ವೃತ್ತಿ. ಡಾಕ್ಟರ್ ಸರ್ವೇಪಲ್ಲಿ ರಾಧಾಕೃಷ್ಣನ್ ಸಾಮಾನ್ಯ ಶಿಕ್ಷಕನಾಗಿ ಉತ್ತಮ ನಾಯಕತ್ವದ ಗುಣ ಹೊಂದಿದ್ದರು. ಉಪರಾಷ್ಟ್ರಪತಿಯಾಗಿ, ಮುಂದೆ ರಾಷ್ಟ್ರಪತಿಯಾಗಿ ಪ್ರಜೆಗಳ ಅಭಿಮಾನಗಳಿಸಿದ ನಾಯಕರಾದರು. ಶಿಕ್ಷಕರು ನೀಡುವ ಉತ್ತಮ ಬೋಧನೆ, ಪ್ರೇರಣೆಯಿಂದ ಕೆಲವೇ ವಿದ್ಯಾರ್ಥಿಗಳು ಮಾತ್ರ ನಾಯಕತ್ವ ಗುಣಗಳನ್ನು ರೂಢಿಸಿಕೊಳ್ಳುತ್ತಾರೆ. ರಾಜಕಾರಣಿ ಅಥವಾ ಒಬ್ಬ ಅಧಿಕಾರಿ ಅಧಿಕಾರದಲ್ಲಿರುವವರೆಗೆ ಮಾತ್ರ ಗೌರವ ಪಡೆಯುತ್ತಾನೆ. ಉತ್ತಮ ಶಿಕ್ಷಕನಿಗೆ ಎಲ್ಲೆಡೆಯೂ, ಯಾವಾಗಲೂ ಗೌರವವಿರುತ್ತದೆ. ಗುರು ಜ್ಯೋತಿಯಂತಿರುವವನು. ಒಂದು ಜ್ಯೋತಿಯಿಂದ ಎಷ್ಟೋ ಜ್ಯೋತಿಗಳನ್ನು ಬೆಳಗಿಸಬಹುದು. ಶಿಕ್ಷಕ ಚೆನ್ನಾಗಿ ಓದು ಎಂದರೆ, ನಾಯಕತ್ವದ ಗುಣವುಳ್ಳ ಉತ್ತಮ ಶಿಕ್ಷಕ ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಿ, ''ನನಗೆ ಗೊತ್ತು ನೀನು ಚೆನ್ನಾಗಿ ಓದುತ್ತಿಯಾ ಎಂದು'' ಎನ್ನುತ್ತಾ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬುತ್ತಾ ಅವರ ಭವಿಷ್ಯಕ್ಕೆ ಬುನಾದಿ ಹಾಕುತ್ತಾನೆ.

ಶಿಕ್ಷಕನಲ್ಲಿರಬೇಕಾದ ಗುಣಗಳಿವು: ಅವನು ಅಪಾರ ಜ್ಞಾನವನ್ನು ಹೊಂದಿರುವವನು; ಆಕರ್ಷಕ ವ್ಯಕ್ತಿತ್ವ, ಆದರ್ಶ ಮೌಲ್ಯ, ಚಾರಿತ್ರ್ಯಗಳಿಂದ ಕೂಡಿ ಮಾದರಿಯಾಗಿರುವವನು; ದೃಢ ನಿರ್ಧಾರಗಳನ್ನು ತೆಗೆದುಕೊಳ್ಳುವವನು; ಛಲ, ನಿರ್ದಿಷ್ಟ ಗುರಿ ಹೊಂದಿದ್ದು, ಮಂದಹಾಸ, ಸಮಯ ಪ್ರಜ್ಞೆ, ತ್ಯಾಗ, ಪವಿತ್ರ ಜೀವನ ಮುಂತಾದ ಉತ್ತಮ ನಾಯಕನ ಗುಣಗಳನ್ನು ಹೊಂದಿರುವವನೇ ಉತ್ತಮ ಶಿಕ್ಷಕ.

ಬಾಲಗಂಗಾಧರ ತಿಲಕರನ್ನೊಮ್ಮೆ ವರದಿಗಾರರು ಸಂದರ್ಶನ ಮಾಡಿದರು. ವರದಿಗಾರ : ''ಸ್ವಾಮಿ! ತಾವು ಸ್ವಾತಂತ್ರ್ಯಕ್ಕಾಗಿ ಬಹಳ ಶ್ರಮವಹಿಸುತ್ತಿರುವಿರಲ್ಲವೆ? ಸ್ವಾತಂತ್ರ್ಯ ಬಂದ ನಂತರ ಮಂತ್ರಿಪದವಿ, ಪ್ರಧಾನ ಮಂತ್ರಿ ಪದವಿ ಕೈಗೊಳ್ಳುವಿರಾ?'' ಬಾಲಗಂಗಾಧರ ತಿಲಕ್ : ''ನಾನೊಬ್ಬನೇ ಮಂತ್ರಿ ಪದವಿ ಸ್ವೀಕರಿಸಿದರೆ ಪ್ರಯೋಜನವೇನು? ನಾನು ಅನೇಕ ಮಂದಿ ಮಂತ್ರಿಗಳನ್ನು, ಪ್ರಧಾನಮಂತ್ರಿಗಳನ್ನು ತಯಾರು ಮಾಡಬಲ್ಲ ಶಿಕ್ಷಕನಾಗಿಯೇ ಇರುತ್ತೇನೆ. ಶಿಕ್ಷಕನ ಸ್ಥಾನವೇ ನನಗೆ ದೊಡ್ಡ ಪದವಿ'' ಎಂದು ಹೇಳಿದರು.

ನಾಯಕರಿಗೆ ನಾಯಕನೇ ಈ ಶಿಕ್ಷಕ. ಅಂದು, ಇಂದು, ಎಂದೆಂದಿಗೂ ಗುರುವಿಗೆ ಉತ್ತಮ ಗೌರವವಿದೆ. ಅದನ್ನು ಉಳಿಸಿಕೊಳ್ಳಬೇಕಷ್ಟೇ. ಒಂದೇ ಅಂಶದಿಂದ ಮಾತ್ರ ಉತ್ತಮ ಶಿಕ್ಷಕ ಎನ್ನಲಾಗದು. ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡುತ್ತಾ, ಅವರ ವರ್ತನೆಯಲ್ಲಿ ಪರಿವರ್ತನೆ ಮಾಡುತ್ತಾ, ಉತ್ತಮ ಪಾಠ, ನಡೆ, ನುಡಿಗಳನ್ನು ಮಾದರಿಯಾಗಿದ್ದುಕೊಂಡು ವಿದ್ಯಾರ್ಥಿಗಳಲ್ಲಿ ಸರ್ವಾಂಗೀಣ ವ್ಯಕ್ತಿತ್ವ ವಿಕಾಸ ಮಾಡುವವನೇ ನಾಯಕತ್ವದ ಗುಣಗಳುಳ್ಳ ಉತ್ತಮ ಶಿಕ್ಷಕ.

**ಎದೆಯ ಹಣತೆಯಲ್ಲಿ ಅಕ್ಷರದ ದೀಪ ಹೊತ್ತಿಸಿ,**
**ಅನೇಕ ಮಂದಿಯ ಬಾಳಿಗೆ ಭವ್ಯ ಬೆಳಕು ಚೆಲ್ಲುವ**
**ಪರಮ ಗುರುಗಳಿಗೆ ನಮೋ ನಮಃ ।**

'ಭಾರತ' ಎಂಬ ಪದದ ಅರ್ಥವೇನು, ಪ್ರಪಂಚದಲ್ಲಿ ಅದರ ಸ್ಥಾನವೇನು ಎಂದು ತಿಳಿಯುವುದು, ಭಾರತದ ನೆಲ ಹಾಗೂ ಜನರಿಗೆ ಸೇವೆ ಮಾಡಲು ವ್ಯಾಕುಲತೆಯನ್ನು ಹೊಂದುವುದು ಇಲ್ಲಿ ಮಹಿಳೆಯರ ಶಿಕ್ಷಣದ ಅಂಗವಾಗಬೇಕು..'ನನ್ನ ದೇಶಕ್ಕೆ ನಾನು ಹೇಗೆ ಸೇವೆ ಮಾಡಲಿ? ಹೇಗೆ, ಹೇಗೆ?' ಎಂಬುದೇ ಇಲ್ಲಿ ಎಲ್ಲ ಸುಶಿಕ್ಷಿತ ಮಹಿಳೆಯರ ಹೃದಯಮಿಡಿತವಾಗಬೇಕು.

— ಸೋದರಿ ನಿವೇದಿತಾ